# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ | 481 |
| ಸದಸ್ಯರ ಹೆಸರು | ಶ್ರೀ ಶಾಂತಾರಾಮ್ ಬುಡ್ನ ಸಿದ್ದಿ (ನಾಮ ನಿರ್ದೇಶನ ಹೊಂದಿದವರು) |
| ಉತ್ತರಿಸುವ ದಿನಾಂಕ | 19-07-2024 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ನಿಷೇಧಿತ ಕ್ರಿಮಿ ನಾಶಕಗಳ ಮತ್ತು ಕಳೆ ನಾಶಕಗಳ ಬಳಕೆ ತಡೆಯಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು; (ವಿವರ ನೀಡುವುದು) | ರಾಜ್ಯ ಸರ್ಕಾರವು ಕೀಟನಾಶಕ ಕಾಯ್ದೆ 1968 ಮತ್ತು ಕೀಟನಾಶಕ ನಿಯಮ, 1971 ರಡಿ ಕಾಯ್ದೆ ಹಾಗೂ ನಿಯಮಗಳ ಉಲ್ಲಂಘನೆಗಳಿಗೆ ಸಂಬಂಧಿಸಿದಂತೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ರಾಜ್ಯದಲ್ಲಿ ಅಪರ ಕೃಷಿ ನಿರ್ದೇಶಕರ ನೇತೃತ್ವದಲ್ಲಿ ಜಾಗೃತಕೋಶ ರಚಿಸಲಾಗಿರುತ್ತದೆ ಮತ್ತು ಇವರ ಅಧೀನದಲ್ಲಿ ರಾಜ್ಯದ 4 ವಿಭಾಗಗಳಲ್ಲಿ (ಬೆಂಗಳೂರು, ಮೈಸೂರು, ಕಲಬುರ್ಗಿ ಮತ್ತು ಬೆಳಗಾವಿ) ಜಂಟಿ ಕೃಷಿ ನಿರ್ದೇಶಕರು (ಜಾಗೃತ ಕೋಶ) ಕಾರ್ಯನಿರ್ವಹಿಸುತ್ತಿದ್ದಾರೆ. ಹೋಬಳಿ, ತಾಲ್ಲೂಕು, ವಿಭಾಗೀಯ ಹಾಗೂ ಜಿಲ್ಲಾ ಮಟ್ಟದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕೃಷಿ ಅಧಿಕಾರಿ, ಕೃಷಿ ಅಧಿಕಾರಿ, ಸಹಾಯಕ ಕೃಷಿ ನಿರ್ದೇಶಕರು, ಉಪ ಕೃಷಿ ನಿರ್ದೇಶಕರು ಹಾಗೂ ಜಂಟಿ ಕೃಷಿ ನಿರ್ದೇಶಕರುಗಳನ್ನು ಸಹಾ ಕೀಟನಾಶಕ ಪರಿವೀಕ್ಷಕರುಗಳನ್ನಾಗಿ ಕೀಟನಾಶಕ ಕಾಯ್ದೆ ಮತ್ತು ನಿಯಮಾವಳಿಗಳನ್ವಯ ಅಧಿಸೂಚನೆಗೊಳಿಸಲಾಗಿರುತ್ತದೆ.<br><br>ಜಾಗೃತ ಕೋಶದ ಅಧಿಕಾರಿಗಳು ಜಂಟಿ ಕೃಷಿ ನಿರ್ದೇಶಕರ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಸಹಾಯಕ ಕೃಷಿ ನಿರ್ದೇಶಕರು (ಜಾರಿದಳ) ಮತ್ತು ಅಧಿಸೂಚಿಸಿರುವ ಕೀಟನಾಶಕ ಪರಿವೀಕ್ಷಕರು ದೂರುಗಳನ್ನು ಆಧರಿಸಿ ಮತ್ತು ಅವರ ವ್ಯಾಪ್ತಿಯಲ್ಲಿನ ಕೀಟನಾಶಕ ಮಾರಾಟ ಮಳಿಗೆ/ಉತ್ಪಾದನಾ ಘಟಕಗಳಿಗೆ ನಿಯಮಿತವಾಗಿ ಭೇಟಿ ನೀಡಿ, ಪರಿಶೀಲನೆಯನ್ನು ಕೈಗೊಂಡು ಆಯಾ ಕಾಯ್ದೆ ಮತ್ತು ನಿಯಮಗಳ ಉಲ್ಲಂಘನೆ ಕಂಡು ಬಂದಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.<br><br>2021-22ನೇ ಸಾಲಿನಲ್ಲಿ ನಿಷೇಧಿತ ಕೀಟನಾಶಕ ಫೋರೇಟ್ ತಯಾರಿಕೆ ಹಾಗೂ ಮಾರಾಟ ವಿರುದ್ಧ (ತಯಾರಕರು: ಮೆ: ಕಲ್ಪತರು ಅಗ್ರಿ ಟೆಕ್, ತುಮಕೂರು ಮತ್ತು ಮಾರಾಟಗಾರರು ಮೆ: ಶ್ರೀ ಸಿದ್ದಲಿಂಗೇಶ್ವರ ಟ್ರೇಡರ್ಸ್, ಬೆಳ್ಳಾವಿ, ತುಮಕೂರು) ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ದಾಖಲಿಸಲಾಗಿ, ಘನ ನ್ಯಾಯಾಲಯವು ತಯಾರಕರು ಹಾಗೂ ಮಾರಾಟಗಾರರಿಗೆ ತಲಾ ರೂ. 10000.00 ರಂತೆ ಒಟ್ಟು ರೂ. 20000.00 ದಂಡ ವಿಧಿಸಿ ಆದೇಶಿಸಿರುತ್ತದೆ. 2023-24ನೇ ಸಾಲಿನಲ್ಲಿ ನಿಷೇಧಿತ ಕೀಟನಾಶಕ ಫೋರೇಟ್ ತಯಾರಿಕಾ ಘಟಕದಲ್ಲಿ (ತಯಾರಕರು: ಮೆ: ಶಾರದಾ |

| | | |
|---|---|---|
| | | ಅಗ್ರೋ ಟೆಕ್, ತುಮಕೂರು) ಕಂಡುಬಂದ ಹಿನ್ನಲೆಯಲ್ಲಿ ಸದರಿ ತಯಾರಕರ ವಿರುದ್ಧ ಕೀಟನಾಶಕ ಕಾಯ್ದೆ ಮತ್ತು ನಿಯಮಗಳ ಉಲ್ಲಂಘನೆಗೆ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ದಾಖಲಿಸಲಾಗಿ, ಘನ ನ್ಯಾಯಾಲಯವು ರೂ.10000.00 ದಂಡ ವಿಧಿಸಿ ಆದೇಶಿಸಿರುತ್ತದೆ. 2023-24ನೇ ಸಾಲಿನಲ್ಲಿ ನಿಷೇಧಿತ ಕೀಟನಾಶಕ ಡೈಕ್ಲೋರೋವಾಸ್ ಮಾರಾಟ ಕಂಡುಬಂದ ಹಿನ್ನಲೆಯಲ್ಲಿ ಸದರಿ ಮಾರಾಟಗಾರರ ವಿರುದ್ಧ ನ್ಯಾಯಾಲಯಗಳಲ್ಲಿ ಮೊಕದ್ದಮೆಯನ್ನು ದಾಖಲಿಸಲಾಗಿ (ತಯಾರಕರು: Infinite Agro Chemical, New Delhi ಮಾರಾಟಗಾರರು: ಮೆ:ಭಾಗ್ಯಲಕ್ಷ್ಮಿ ಏಜೆನ್ಸಿಸ್, ವೈ.ಎನ್. ಹೊಸಕೋಟೆ, ಪಾವಗಡ), ಘನ ನ್ಯಾಯಾಲಯವು ಮಾರಾಟಗಾರರಿಗೆ ರೂ.10000.00 ದಂಡ ವಿಧಿಸಿ ಆದೇಶಿಸಲಾಗಿರುತ್ತದೆ.<br><br>ರಾಜ್ಯದಲ್ಲಿ ಕೇಂದ್ರೀಯ ಕೀಟನಾಶಕ ಮಂಡಳಿ ಮತ್ತು ನೋಂದಣಿ ಸಮಿತಿ ಶಿಫಾರಸ್ಸು ಮಾಡಿರುವ ಹಾಗೂ ಕರ್ನಾಟಕ ರಾಜ್ಯದಲ್ಲಿ ಬೆಳೆಗಳಿಗೆ ಶಿಫಾರಸ್ಸು ಮಾಡಲಾಗಿರುವ ಪೀಡೆನಾಶಕಗಳನ್ನು ಅವಶ್ಯಕತೆಗೆ ಅನುಗುಣವಾಗಿ ಬಳಕೆ ಮಾಡಲು ರೈತರಲ್ಲಿ ಅರಿವು ಮೂಡಿಸಲಾಗುತ್ತಿದೆ. |
| ಆ) | ಕೃಷಿ ಭೂಮಿಯಲ್ಲಿ ರಾಸಾಯನಿಕ ಗೊಬ್ಬರ ಬದಲು ಉತ್ತಮ ಬೆಳೆ ಪಡೆಯಲು ನ್ಯೂ ಯೂರಿಯಾ ಕೊಟ್ಟಿಗೆ ಗೊಬ್ಬರ ಬಳಕೆ ಮಾಡುವಂತೆ ರೈತರಿಗೆ ಜಾಗೃತಿ ಕಾರ್ಯಕ್ರಮಗಳನ್ನು ರೂಪಿಸಲು ಸರ್ಕಾರವು ಕ್ರಮವಹಿಸುವುದೇ? (ಮಾಹಿತಿ ನೀಡುವುದು) | ನ್ಯಾನೋ ಯೂರಿಯಾ (ದ್ರವ ರೂಪ)ದ ಗೊಬ್ಬರವಾಗಿದ್ದು ಭಾರತೀಯ ಕೃಷಿ ಅನುಸಂಧಾನ ಸಂಸ್ಥೆ ಮತ್ತು ರಾಜ್ಯ ಕೃಷಿ ವಿಶ್ವವಿದ್ಯಾನಿಲಯಗಳು ನೀಡಿದ ಉತ್ತೇಜಕ ಕ್ಷೇತ್ರ ಪ್ರಯೋಗಗಳ ಫಲಿತಾಂಶಗಳ ಆಧಾರದ ಮೇಲೆ ರೈತರಿಗೆ ಬಳಕೆ ಮಾಡಲು ಮೆ. ಇಫ್ಕೋ ಮತ್ತು ಮೆ. ಝುವಾರಿ ಫಾರಂ ಹಬ್ ಲಿ., ಸಂಸ್ಥೆಗಳು ಕೃಷಿ ಇಲಾಖೆಯ ಸಹಯೋಗದೊಂದಿಗೆ ರೈತರಿಗೆ ತರಬೇತಿ/ ಪ್ರಾತ್ಯಕ್ಷಿಕೆ/ ಕಾರ್ಯಾಗಾರ/ ಜಾಹೀರಾತುಗಳ ಮೂಲಕ ನ್ಯಾನೋ ಯೂರಿಯಾದ ಉಪಯೋಗದ ಬಗ್ಗೆ ವ್ಯಾಪಕವಾಗಿ ಪ್ರಚಾರ ನೀಡಿ ಪೂರಕ ಬಳಕೆಗೆ ಉತ್ತೇಜಿಸಲಾಗುತ್ತಿದೆ.<br><br>ಸಾವಯವ ಗೊಬ್ಬರ/ಕೊಟ್ಟಿಗೆ ಗೊಬ್ಬರ, ಹಸಿರೆಲೆ ಗೊಬ್ಬರ, ಜೈವಿಕ ಗೊಬ್ಬರಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಬಳಕೆ ಮಾಡುವ ಬಗ್ಗೆ ರೈತರಲ್ಲಿ ಜಾಗೃತಿ ಮೂಡಿಸಲು ವಿವಿಧ ಯೋಜನೆಗಳಡಿ ಕೃಷಿ ಅಭಿಯಾನ / ತರಬೇತಿಗಳು / ಪ್ರಾತ್ಯಕ್ಷಿಕೆಗಳ ಕಾರ್ಯಕ್ರಮಗಳನ್ನು ಆಯೋಜಿಸುವುದರ ಜೊತೆಗೆ ಸಾವಯವ ಪರಿಕರಗಳನ್ನು ಸಹಾಯಧನದಡಿ ವಿತರಿಸಲಾಗುತ್ತಿದೆ. |

ಸಂಖ್ಯೆ: AGRI/148/ACT/2024

**(ಎನ್. ಚಲುವರಾಯಸ್ವಾಮಿ)**

ಕೃಷಿ ಸಚಿವರು